# ಜೆ.ಎಂ.ಎಫ್.ಸಿ. ನ್ಯಾಯಾಲಯ, ಸಿದ್ದಾಪುರ



| | |
|---|---|
| ಹೆಸರುಃ | ಗಜಾನನ ಗಣಪತಿ ನಾಯ್ಕ |
| ತಂದೆ/ಗಂಡನ ಹೆಸರುಃ | ಗಣಪತಿ ನಾಯ್ಕ |
| ವಯಸ್ಸುಃ | 40 ವರ್ಷ |
| ಉದ್ಯೋಗಃ | ಕೂಲಿ |
| ವಾಸಃ | ಗೂಳಿಕೈ |

ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 22-12-2025 ರಂದು ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ**

1. ಚಾಸಾ-1 ನನ್ನ ಅಣ್ಣ. ಚಾಸಾ-5 ರಿಂದ 8 ನಮ್ಮ ಸಂಬಂದಿಕರು. ಚಾಸಾ-1 ರವರಿಗೆ ಕುರವಂತೆ ಗ್ರಾಮದಲ್ಲಿ ಸರ್ವೆ ನಂ 7 ರಲ್ಲಿ 1 ಎಕರೆ 30 ಗುಂಟೆ ಜಮೀನು ಇರುತ್ತದೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ಗೊತ್ತು. ಈ ದಿನ 8 ನೇ ಆರೋಪಿ ನ್ಯಾಯಾಲಯಕ್ಕೆ ಗೈರು ಹಾಜರಿದ್ದು 8 ನೇ ಆರೋಪಿತನ ಗುರುತಿಸುವಿಕೆಗೆ 8 ನೇ ಆರೋಪಿ ಪರ ವಕೀಲರು ಯಾವುದೇ ತಕರಾರು ಇರುವುದಿಲ್ಲ ಎಂದು ಹೇಳಿರುತ್ತಾರೆ.

2. ಸದರಿ ಕುರುವಂತೆ ಗ್ರಾಮ ಸರ್ವೆ ನಂ 7 ಕ್ಕೆ ಹೊಂದಿಕೊಂಡಂತೆ ಆರೊಪಿತರಿಗೆ ಕುರವಂತೆ ಗ್ರಾಮ ಸರ್ವೆ ನಂ 8 ರ ಜಮೀನು ಇರುತ್ತದೆ.

3. ದಿಃ 16-07-2020 ರಂದು ಬೆಳಿಗ್ಗೆ 10-00 ರಿಂದ 10-30 ಗಂಟೆಗೆ ಕುರವಂತೆ ಗ್ರಾಮದಲ್ಲಿ ಸರ್ವೆ ನಂ 7 ರಲ್ಲಿ ನಾನು ಮತ್ತು ಚಾಸಾ-1, 5 ರಿಂದ 8 ರವರು ಜಮೀನಿನಲ್ಲಿ ನೆಟಿ ಮಾಡುತ್ತಿದ್ದು , ಆಗ 2 ನೇ ಆರೋಪಿ ಚಾಸಾ-1 ರವರಿಗೆ ಕೈಗೆ ಮತ್ತು ಕಾಲಿಗೆ ಬಡಿಗೆಯಿಂದ ಹೊಡೆದು, ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ. 8 ನೇ ಆರೋಪಿ ಚಾಸಾ-1 ರವರ ತಲೆಗೆ ಕತ್ತಿಯಿಂದ ಹೊಡೆದಿರುತ್ತಾರೆ. ಉಳಿದ ಆರೋಪಿತರು ಚಾಸಾ-1 ರವರಿಗೆ ಕೈಯಿಂದ ಗುದ್ದಿರುತ್ತಾರೆ. ನನಗೆ 4 ಮತ್ತು 6 ನೇ ಆರೋಪಿತರು ಕೈಯಿಂದ ತಲೆಗೆ ಬುಜಕ್ಕೆ ಗುದ್ದಿರುತ್ತಾರೆ. ನಂತರ ಸದರಿ ಗಲಾಟೆಯನ್ನು ಅಲ್ಲಿಂದ ನಮ್ಮ ಸಂಬಂದಿಸಿಕರು ಬಿಡಿಸಿರುತ್ತಾರೆ.

4. ನಂತರ ನನ್ನನ್ನು ಮತ್ತು ಚಾಸಾ-1 ರವರನ್ನು ಚಾಸಾ-7 ರವರು ಓಮಿನಿ ಕಾರಿನಲ್ಲಿ ಸಿದ್ದಾಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆಗಾಗಿ ದಾಖಲಿಸಿರುತ್ತಾರೆ. ನಾನು ಮತ್ತು ಚಾಸಾ-1 ರವರು

ಸಿದ್ದಾಪುರ ಸರ್ಕಾರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇವೆ. ನಾವು ಸಿದ್ದಾಪುರ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ಸಿದ್ದಾಪುರ ಪೋಲೀಸರು ಅಲ್ಲಿಗೆ ಬಂದಿರುತ್ತಾರೆ. ಸದರಿ ಗಲಾಟೆಗೆ ಸಂಬಂದಿಸಿದಂತೆ ಆರೋಪಿತರ ವಿರುದ್ಧ ನನ್ನ ಅಣ್ಣ ಚಾಸಾ–1ರವರು ಪೋಲೀಸ ಠಾಣೆಯಲ್ಲಿ ದೂರು ನೀಡಿರುತ್ತಾರೆ. ನಾನು ಸದರಿ ಗಲಾಟೆಬಗ್ಗೆ ಹೇಳಿಕೆ ನೀಡಿರುತ್ತೇನೆ.

5. ಆರೋಪಿತರು ಆ ದಿನ ನಮಗೆಹೊಡೆದ ಬಳಸಿದ ಬಡಿಗೆ ಮತ್ತು ಕತ್ತಿಯನ್ನು ನೋಡಿದರೆ ಈಗ ಗುರುತಿಸಲು ಆಗುವುದಿಲ್ಲ. ಆ ದಿನ ನನಗೆ ಮತ್ತು ಚಾಸಾ–1ರವರಿಗೆ ನ್ಯಾಯಾಲಯದ ಮುಂದೆ ಇರುವ ಆರೋಪಿತರು ಹೊಡೆದಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಹಾಗೂ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ ಸಾಕ್ಷಿಯು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷ್ಯ ನುಡಿರುವುದರಿಂದ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಎ.ಪಿ.ಪಿ ರವರಿಂದಃ**

ದಿಃ 16–07–2020 ರಂದು ಚಾಸಾ–1 ರವರನ್ನು 2 ನೇ ಆರೋಪಿ ಕುತ್ತಿಗೆ ಹಿಡಿದು ತಳ್ಳಿರುತ್ತಾರೆ ಎಂದರೆ ಸರಿ. ನಂತರ 1, 3 ರಿಂದ 8 ಮತ್ತು 10 ನೇ ಆರೋಪಿತರು ಚಾಸಾ–1ರವರ ಎಡಗೈ ಮತ್ತು ಬಲಗಾಲಿಗೆ ಹೊಡೆದು ಹಲ್ಲೆ ಪಡಿಸಿರುತ್ತಾರೆ ಎಂದರೆ ಸರಿ. ನಂತರ 1, 4, 7, 9 ಮತ್ತು 10 ನೇ ಆರೋಪಿತರು ಚಾಸಾ–1ರವರಿಗೆ ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ನ್ಯಾಯಾಲಯದ ಮುಂದೆ ಇರುವ ಬಡಿಗೆ ಮತ್ತು ಕತ್ತಿಯಿಂದ ಆರೋಪಿತರು ನನಗೆ ಮತ್ತು ಚಾಸಾ–1 ರವರಿಗೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಆರ್ ಆರ್ ಎಚ್ ವಕೀಲರಿಂದಃ**

ನನ್ನ ಅಣ್ಣ ಚಾಸಾ–1ರವರು ಕುರವಂತೆ ಗ್ರಾಮದಲ್ಲಿ ಸರ್ವೆ ನಂ 7/1 ರಲ್ಲಿ ಜಮೀನನ್ನು ಖರೀದಿ ಮಾಡಿರುತ್ತಾರೆ. ಚಾಸಾ–1ರವರು ಸದರಿ ಜಮೀನನ್ನು ಖರೀದಿ ಮಾಡುವ ಪೂರ್ವದಲ್ಲಿ 1ನೇ ಆರೋಪಿ ಸಾಗುವಳಿ ಮಾಡುತ್ತಿದ್ದರು. ಸದರಿ ಕುರವಂತೆ ಗ್ರಾಮದಲ್ಲಿ ಸರ್ವೆ ನಂ 7/1 ರ ಜಮೀನಿಗೆ ಕಾಲುದಾರಿ ಇದ್ದು ಆದರೆ ಸದರಿ ಕಾಲುದಾರಿ ಯಾವ ಸರ್ವೆ ನಂಬರನಲ್ಲಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ಅಣ್ಣ ಚಾಸಾ–





1 ರವರು ಖರೀದಿ ಮಾಡಿದ ಜಮೀನಿನ ಸುತ್ತಮುತ್ತ ಯಾವ ಯಾವ ಸರ್ವೆ ನಂಬರಗಳ ಜಮೀನು ಬರುತ್ತದೆ ಎಂದು ನನಗೆ ಗೊತ್ತಿಲ್ಲ .

2. ಕುರವಂತೆ ಎಂ ಆರ್ ನಾಯ್ಕ ಎಂಬುವವರ ಮನೆಯಿಂದ ಸದರಿ ಜಮೀನು ಸುಮಾರು 100 ಅಡಿ ಇರುತ್ತದೆ. ಚಾಸಾ–1 ಖರೀದಿ ಮಾಡಿದ ಜಮೀನಿನ ಸುತ್ತಮುತ್ತ ಎಷ್ಟು ಮನೆಗಳು ಇರುತ್ತವೆ ಎಂದು ನನಗೆ ಗೊತ್ತಿಲ್ಲ.

3. ನನ್ನ ಅಣ್ಣ ಚಾಸಾ-1ರವರು ಖರೀದಿ ಮಾಡಿದ ಜಮೀನಿನ ಕ್ರಯ ಪತ್ರದಲ್ಲಿ ದಾರಿಯ ಬಗ್ಗೆ ನಮೂದಿಸಿರುತ್ತಾರೆಯೊ ಇಲ್ಲವೊ ನನಗೆ ಗೊತ್ತಿಲ್ಲ. ನಾನು ಮತ್ತು ನನ್ನ ಅಣ್ಣ ಚಾಸಾ-1 ರವರು ನಮ್ಮ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿ ವಾಸವಿದ್ದೆವು.

4. ಸದರಿ ದಿಃ 16-07-2020 ಯಾವ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ಆ ದಿನ ನಾವು ಯಾವುದೇ ಗದ್ದೆಯನ್ನು ನಾಟಿ ಮಾಡಿರುವುದಿಲ್ಲ. ಚಾಸಾ-7 ಮತ್ತು 8ರವರನ್ನು ಕೆಲಸಕ್ಕಾಗಿ ನಾನು ಕರೆಸಿರುತ್ತೇನೆ. ನಾವು ಈಗ ಎರಡೂ ವರ್ಷಗಳ ಹಿಂದೆ ನಮ್ಮ ಕುಟುಬಂದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತೇವೆ. 2020 ರಲ್ಲಿ ನಾನು ಮತ್ತು ಚಾಸಾ-1ರವರು ಒಟ್ಟಿಗೆ ಇದ್ದೆವು. ಆ ದಿನ ನಾವು ಸದರಿ ಜಮೀನಿನ ಕೆಲಸಕ್ಕಾಗಿ ಸುಮಾರು 15 ಜನರನ್ನು ಕರೆಯಿಸಿರುತ್ತೇವೆ.

5. ದಿಃ 17-07-2020 ರಂದು ನಾನು ನೀಡಿದ ಹೇಳಿಕೆಯಲ್ಲಿ ದಾರಿಯ ವಿಷಯವಾಗಿ ದ್ವೇಷದಿಂದ ಇದ್ದ ಮಂಜುನಾಥ ಹಾಗೂ ಆತನ ಸಂಬಂದಿಗಳು ಈ ದಿನ ನಮ್ಮೊಂದಿಗೆ ಮತ್ತೆ ತಕರಾರು ಮಾಡಬಹುದು ಎಂತಾ ಮೊದಲೇ ಊಹಿಸಿದ್ದ ನನ್ನ ಅಣ್ಣ ನನಗೆ ಪರಿಚಯದ ಕೊಂಡ್ಲಿಯ ಸುಧೀರ್ ನಾಯ್ಕ ಮತ್ತು ಬಾಸ್ಕರ ನಾಯ್ಕ ಎಂಬುವವರಿಗೆ ಮಂಜುನಾಥನಿಗೆ ತಿಳಿಸಿ, ಹೇಳಿ ಬಗೆಹರಿಸಲು ಬರುವಂತೆ ಕೇಳಿಕೊಂಡಂತೆ ಅವರು ಸಹ ಗದ್ದೆ ಹತ್ತಿರ ಬಂದಿದ್ದರು ಎಂದು ನಾನು ಹೇಳಿಕೆ ನೀಡಿರುವುದಿಲ್ಲ. ಸದರಿ ಭಾಗವನ್ನು ನಿ.ಡಿ-1 ಎಂದು ಗುರುತಿಸಲಾಯಿತು.

6. ಆ ದಿನ ನನ್ನ ಮತ್ತು ಉಳಿದ 15 ಜನ ಬಳಿ ಕೈಯಲ್ಲಿ ಯಾವುದೇ ವಸ್ತುಗಳು ಇರಲಿಲ್ಲ. ನಾನು ಪೋಲೀಸರ ಮುಂದೆ ಹೇಳಿಕೆ ನೀಡುವಾಗ ನಾವು 15 ಜನ ನಮ್ಮ ಜಮೀನಿನ ಕೆಲಸಕ್ಕೆ ಬಂದ ಬಗ್ಗೆ ಹಾಗೂ ಆ ದಿನ ನಮ್ಮ ಬಳಿ ಯಾವುದೇ ವಸ್ತುಗಳು ಇರಲಿಲ್ಲ ಎಂದು ಹೇಳಿಕೆ ನೀಡಿಲ್ಲ.

7. ನಾವು ಆ ದಿನ ನಮ್ಮ ಗದ್ದೆಯಲ್ಲಿ ಇದ್ದಾಗ ಆರೋಪಿತರು ಬಂದಿರುತ್ತಾರೆ. ಆಗ ನಾವೆಲ್ಲರೂ ನಮ್ಮ ಗದ್ದೆಯಲ್ಲಿ ಸುಮ್ಮನೆ ನಿಂತುಕೊಂಡಿದ್ದೆವು. ಆಗ 2 ನೇ ಆರೋಪಿ ಮೊದಲಿಗೆ ಅಲ್ಲಿಗೆ ಬಂದಿರುತ್ತಾರೆ. ಆ ನಂತರ 6 ನೇ ಆರೋಪಿ ಮತ್ತು ನಿತಿನ್ ಎಂಬುವವರು ಬಂದಿರುತ್ತಾರೆ. ಆ ನಂತರ ಉಳಿದ ಆರೋಪಿತರು ಬಂದಿರುತ್ತಾರೆ. 2 ನೇ ಆರೋಪಿ ಬಂದಕೂಡಲೆ ಚಾಸಾ-1ರವರಿಗೆ ಬಡಿಗೆಯಿಂದ ಹೊಡೆಯಲು ಪ್ರಾರಂಬಿಸಿರುತ್ತಾರೆ. ಸದರಿ ಬಡಿಗೆಯನ್ನು 2 ನೇ ಆರೋಪಿ ಎಲ್ಲಿಂದ ತಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆಗ ಚಾಸಾ-1ರವರ ತಲೆಗೆ ಮತ್ತು ಎಡಗೈಗೆ ರಕ್ತಗಾಯಗಳಾಗಿರುತ್ತದೆ. ಆಗ ಚಾಸಾ-1ರವರ ಬಟ್ಟೆ ಸದರಿ





ರಕ್ತ ತಾಗಿರುತ್ತದೆ. ಸದರಿ ಗಲಾಟೆಯ ಸಮಯದಲ್ಲಿ ನಮ್ಮ ಗದ್ದೆಗೆ ನೀರು ತುಂಬಿತ್ತು. 2 ನೇ ಆರೋಪಿ ಚಾಸಾ-1ರವರನ್ನು ಹೊಡೆಯುವಾಗ ನಾನು ಸುಮಾರು 1 ಮೊಳಾ ಅಂತರದಲ್ಲಿ ಇದ್ದೆನು. 8 ನೇ ಆರೋಪಿ ಕತ್ತಿಯನ್ನು ಎಲ್ಲಿಂದ ತಂದಿರುತ್ತಾನೆ ಎಂದು ನನಗೆ ಗೊತ್ತಿಲ್ಲ.

8. ನನ್ನ ಪ್ರಕಾರ ಸದರಿ ಗಲಾಟೆ ನೀರಿರುವ ನಮ್ಮ ಗದ್ದೆಯಲ್ಲಿ ಆಗಿರುತ್ತದೆ. ನಾನು ಪೋಲೀಸರ ಮುಂದೆ ನೀಡಿದ ಹೇಳಿಕೆ ಸದರಿ ಗಲಾಟೆ ನೀರಿರುವ ನಮ್ಮ ಗದ್ದೆಯಲ್ಲಿ ಆಗಿರುತ್ತದೆ ಎಂದು ಹೇಳಿರುತ್ತೇನೆ. ಗಲಾಟೆ ಆಯಿತು ಎಂದು ಹೇಳಿದ ದಿನ ಮಳೆ ಬರುತ್ತಿತ್ತು. ಆ ದಿನ ನಾವು ಕಂಬಳಿಯನ್ನು ಹಾಕಿಕೊಂಡಿದ್ದೆವು. ಸದರಿ ಕಂಬಳಿಯನ್ನು ಪೊಲೀಸರಿಗೆ ನೀಡಿರುತ್ತೇವೆಯೊ ಇಲ್ಲವೊ ನನಗೆ ಗೊತ್ತಿಲ್ಲ.

9. ಸದರಿ ಕತ್ತಿ ಮತ್ತು ಬಡಿಗೆಗಳು ಏನು ಆಗಿರುತ್ತವೆ ಎಂದು ನನಗೆ ಗೊತ್ತಿಲ್ಲ. ನಾನು ಈ ಪ್ರಕರಣಕ್ಕೆ ಸಂಬಂದಿಸಿದಂತೆ ಪೋಲೀಸರಿಗೆ ಯಾವುದೇ ಬಟ್ಟೆ ನೀಡಿರುತ್ತೇನೆಯೊ ಇಲ್ಲವೊ ನನಗೆ ಗೊತ್ತಿಲ್ಲ.

10. 1 ನೇ ಆರೋಪಿ ನನ್ನ ಮತ್ತು ಚಾಸಾ-1 , 5 ರಿಂದ 7 ರವರ ವಿರುದ್ದ ಪೊಲೀಸ ದೂರು ನೀಡಿದ್ದರು ಎಂದರೆ ಸರಿ. ನಾನು ಮತ್ತು ಚಾಸಾ-1, 5 ರಿಂದ 8 ರವರು 1 ನೇ ಆರೋಪಿಯ ಜಮೀನಿನಲ್ಲಿ ಹೊಸತಾಗಿ ರಸ್ತೆ ಮಾಡಲು ಹೋಗಿ ಆರೋಪಿತರಿಗೆ ಹೊಡೆ ಬಡೆ ಮಾಡಿ ಆರೋಪಿತರ ವಿರುದ್ದ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

11. ಸದರಿ ಗಲಾಟೆಯಿಂದ ನನ್ನ ಎಡಗಾಲಿಗೆ ಗಾಯ ವಾಗಿರುತ್ತದೆ. ನಾನು ಸಿದ್ದಾಪುರ ಸರ್ಕಾರಿ ಆಸ್ಪತ್ರೆಯಲ್ಲಿ ಒಂದು ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ಸದರಿ ಗಲಾಟೆಯಾದ ಎರಡು ದಿನಗಳ ನಂತರ ನನ್ನನ್ನು ಪೊಲೀಸ ಠಾಣೆಗೆ ಕರೆಯಿಸಿರುತ್ತಾರೆ.

12. 1 ನೇ ಆರೋಪಿತನಿಗೆ ಸೇರಿದ ಜಮೀನಿನ ಸರ್ವೆ ನಂಬರ ನನಗೆ ಗೊತ್ತಿಲ್ಲ. ಚಾಸಾ-1 ರವರು ನಿ.ಪಿ-1 ದೂರಿನಲ್ಲಿ ಏನು ಬರೆಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

13. ನನ್ನ ಅಣ್ಣ ಚಾಸಾ-1 ಖರೀದಿ ಮಾಡಿದ ಜಮೀನಿಗೆ ರಸ್ತೆ ಇರುವ ಬಗ್ಗೆ ದಾಖಲೆಯನ್ನು ನಾನು ನೋಡಿಲ್ಲ. ಮು.ಮಾ-1 ರ ಬಡಿಗೆ ಮತ್ತು ಕತ್ತಿಯನ್ನು ಯಾರು ಪೋಲೀಸರಿಗೆ ನೀಡಿರುತ್ತಾರೆ ಮತ್ತು ಎಲ್ಲಿಂದ ತಂದು ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

14. ದಿಃ 16-07-2020 ರಂದು ನಮ್ಮ ಗದ್ದೆಗೆ ಬಂದು ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಹೊಡೆ ಬಡೆ ಮಾಡಿಲ್ಲ ಮತ್ತು ಜೀವಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ.

15. ಸದರಿ ಗಲಾಟೆ ಸುಮಾರು 2 ತಾಸುಗಳ ಕಾಲ ಆಗಿರುತ್ತದೆ. ಸದರಿ ಗಲಾಟೆಯ ಸಮಯದಲ್ಲಿ ಎಂ ಆರ್ ನಾಯ್ಕ ಎಂಬುವವರು ಸದರಿ ಗಲಾಟೆ ಆಯಿತು ಎಂದು ಹೇಳುವ ಸ್ಥಳಕ್ಕೆ ಬಂದಿದ್ದರೊ ಇಲ್ಲವೊ ಎಂದು ನನಗೆ ಗೊತ್ತಿಲ್ಲ. ಸದರಿ ಗಲಾಟೆಯಲ್ಲಿ ಯಾವ ಯಾವ ಆರೋಪಿತರಿಗೆ ಏನೆನು ಗಾಯಗಳಾಗಿರುತ್ತವೆ ಎಂದು ನನಗೆ ಗೊತ್ತಿಲ್ಲ.



16. ನನ್ನ ಅಣ್ಣ ಚಾಸಾ-1 ರವರು ಸಲ್ಲಿಸಿರುವ OS 91/2019 ಕ್ಕೆ ಸಹಾಯ ಆಗಲಿ ಎಂದು ನಾನು ಮತ್ತು ನನ್ನ ಅಣ್ಣ ಚಾಸಾ-1 ರವರು ಸೇರಿ ಆರೋಪಿತರ ವಿರುದ್ದ ಈ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

17. ದಿಃ 16-07-2020 ರಂದು ಆರೋಪಿತರು ಚಾಸಾ-1 ನನ್ನ ಅಣ್ಣನ ಜಮೀನಿಗೆ ಬಂದಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ, ನಮಗೆ ಬಡಿಗೆ ಹಾಗೂ ಕತ್ತಿಯಿಂದ ಹಲ್ಲೆಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಬಡಿಗೆಯಿಂದ ಮತ್ತು ಕತ್ತಿಯಿಂದ ಹೊಡೆದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದು ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

18. ನಮ್ಮ ಮತ್ತು ಆರೋಪಿತರ ನಡುವೆ ನನ್ನ ಅಣ್ಣ ಚಾಸಾ-1 ರವರು ಗದ್ದೆಯನ್ನು ಖರೀದಿ ಮಾಡಿದ ದಿನದಿಂದ ವೈಮನಸ್ಸು ಇರುತ್ತದೆ.

19. ಆರೋಪಿತರ ಜಮೀನಿನಲ್ಲಿ ದಾರಿ ಪಡೆಯಬೇಕೆಂಬ ಉದ್ದೇಶದಿಂದ ದಿಂದ OS 91/2019 ಸಲ್ಲಿಸಿದ್ದರಿಂದ ಆರೋಪಿತರ ವಿರುದ್ದ ಈ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ  ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ ಸರಿ ಇದೆ.**

**ಸಹಿ ಇದೆ.**

**ಜೆ.ಎಂ.ಎಫ್.ಸಿ, ಸಿದ್ದಾಪುರ.**

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಸಿದ್ದಾಪುರ

ಸಿ.ಸಿ ನಂಃ 596 /2020

ಸಿಡಬ್ಲ್ಯೂಃ 3 ಪಿಡಬ್ಲ್ಯೂಃ 2

| | |
|---|---|
| ಹೆಸರುಃ | ಈರಾ ಈಶ್ವರ ನಾಯ್ಕ |
| ತಂದೆ/ಗಂಡನ ಹೆಸರುಃ | ಈಶ್ವರ ನಾಯ್ಕ |
| ವಯಸ್ಸುಃ | 49 ವರ್ಷ |
| ಉದ್ಯೋಗಃ | ಕೃಷಿ |
| ವಾಸಃ | ಕಳೂರ, ಗೋಳಿಕೈ ಸಿದ್ದಾಪುರ |

ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 22-12-2025 ರಂದು ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ**

1. ಚಾಸಾ-1 ಮತ್ತು 2 ಗೊತ್ತು. ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆ ದಿಃ 17-07-2020 ರ ಸ್ಥಳ ಪಂಚನಾಮೆ ಆಗಿದ್ದು, ಸಾಕ್ಷಿ  ಸದರಿ ದಾಖಲೆ ನೋಡಿ ಗುರುತಿಸಿದ್ದು, ಅದನ್ನು  ಈಗಾಗಲೇ ನಿ.ಪಿ-2 ಎಂದು,  ಸಾಕ್ಷಿಯ ಸಹಿಯನ್ನು ನಿ.ಪಿ-2 (ಬಿ) ಎಂದು ಗುರುತಿಸಲಾಯಿತು.  ನಿ.ಪಿ-2 ಪಂಚನಾಮೆಯನ್ನು ಕುರವಂತೆ ಗ್ರಾಮದ ಚಾಸಾ-1ರವರ ಜಮೀನಿನಲ್ಲಿ ಮಾಡಿರುತ್ತಾರೆ. ಆಗ ನಾನು, ಚಾಸಾ-2ರವರು ಇದ್ದೆವು. ನಮ್ಮ ಸಮಕ್ಷಮ ಚಾಸಾ-1ರವರು ಸದರಿ ಸ್ಥಳವನ್ನು ತೋರಿಸಿರುತ್ತಾರೆ. ಸದರಿ ಸ್ಥಳದಲ್ಲಿ ಪೋಲೀಸರು ಪಂಚನಾಮೆ

ಮಾಡಿರುತ್ತಾರೆ. ಸದರಿ ಸ್ಥಳದಲ್ಲಿ ಪಂಚನಾಮೆ ಕಾಲಕ್ಕೆ ಬಡಿಗೆ ಮತ್ತು ಕತ್ತಿಯನ್ನು ವಶಪಡಿಸಿಕೊಂಡಿರುತ್ತಾರೆ. ಪಂಚನಾಮೆ ಕಾಲಕ್ಕೆ ಎರಡು ಪೊಟೊಗಳನ್ನು ತೆಗೆದಿರುತ್ತಾರೆ. ಆ ದಿನ ಪೋಲೀಸರು ವಶಪಡಿಸಿಕೊಂಡಿರುವ ಬಡಿಗೆಗಳು ಮತ್ತು ಕತ್ತಿ ಈಗ ನ್ಯಾಯಾಲಯದ ಮುಂದೆ ಇರುವ ಬಡಿಗೆ ಆಗಿರುತ್ತದೆ . ಅದು ಈಗಾಗಲೇ ಮುಮಾ–1 ಎಂದು ಗುರುತಿಸಲಾಗಿದ್ದು, ಸದರಿ ಮು.ಮಾ–1ರ ಮೇಲಿರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಮು.ಮಾ–1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈ ಹಂತದಲ್ಲಿ ಎರಡು ಭಾವಚಿತ್ರವನ್ನು ತೋರಿಸಿದ್ದು, ಸದರಿ ಭಾವಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ.ಪಿ–3 ಮತ್ತು 4 ಎಂದು ಗುರುತಿಸಲಾಗಿದೆ. ಸದರಿ ಪಂಚನಾಮೆಯನ್ನು ಬೆಳಿಗ್ಗೆ 10–00 ರಿಂದ 11–00 ವರೆಗೆ ಮಾಡಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಆರ್ ಆರ್ ಎಚ್ ವಕೀಲರಿಂದಃ**



ನಿ.ಪಿ–2 ರ ಪಂಚನಾಮೆಗೆ ನಮ್ಮನ್ನು ಯಾರು ಕರೆದಿಲ್ಲ. ಸದರಿ ಪಂಚನಾಮೆಯನ್ನು ಎಂ ಆರ್ ನಾಯ್ಕ ರವರ ಮನೆಯ ಕೆಳಭಾಗದಲ್ಲಿ ಮಾಡಿರುತ್ತಾರೆ. ನಿ.ಪಿ–2 ಪಂಚನಾಮೆಯನ್ನು ನಾನು ಹೇಳಿ ಬರೆಸಿರುವುದಿಲ್ಲ. ನಿ.ಪಿ–2 ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಿ.ಪಿ–2 ಪಂಚನಾಮೆಗೆ ಪೋಲೀಸರು ಸಹಿ ಮಾಡು ಎಂದು ಹೇಳಿದ್ದರಿಂದ ಸಹಿ ಮಾಡಿರುತ್ತೆನೆ. ಆ ದಿನ ಪೋಲೀಸರು ಸದರಿ ಸ್ಥಳದಲ್ಲಿ ಎಷ್ಟು ಪಂಚನಾಮೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ನಿ.ಪಿ–2 ಪಂಚನಾಮೆಯನ್ನು ಪೋಲೀಸರು ಯಾವ ಸರ್ವೆ ನಂಬರನಲ್ಲಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಕತ್ತಿ ಮತ್ತು ಬಡಿಗೆಯನ್ನು ಸದರಿ ನಿಪಿ–3 ಮತ್ತು 4 ಪೊಟೊದಲ್ಲಿ ಇರುತ್ತದೆಯೊ ಇಲ್ಲವೊ ನನಗೆ ಗೊತ್ತಿಲ್ಲ. ಸದರಿ ಕತ್ತಿ ಮತ್ತು ಬಡಿಗೆಯನ್ನು ಪೋಲಿಸರಿಗೆ ಯಾರು ನೀಡಿರುತ್ತಾರೆಯೊ ಎಂದು ನನಗೆ ಗೊತ್ತಿಲ್ಲ. ನಾನು ನಿ.ಪಿ–2 ಪಂಚನಾಮೆಗೆ ಸಹಿ ಮಾಡಿದಾಗ ಬೆಸಿಗೆ ಕಾಲ ಇರುತ್ತದೆ. ಪೋಲೀಸರು ಸಹಿ ಮಾಡು ಎಂದು ಹೇಳಿದ್ದರಿಂದ ನಿ.ಪಿ–2 ಪಂಚನಾಮೆಗೆ ಸಹಿ ಮಾಡಿರುತನೆ. ಅದನ್ನು ಹೊರತುಪಡಿಸಿ ನಿ.ಪಿ–2 ರಲ್ಲಿ ಏನು ಬರೆದಿದೆ ಎಂದುನನಗೆ ಗೊತ್ತಿಲ್ಲ. ನಿ.ಪಿ–2 ಕ್ಕೆ ನಾನು ಎಲ್ಲಿ ಸಹಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ.

**ಮರುವಿಚಾರಣೆಃ** ಇಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ ಸರಿ ಇದೆ.**

**ಸಹಿ ಇದೆ.**

**ಜೆ.ಎಂ.ಎಫ್.ಸಿ, ಸಿದ್ದಾಪುರ.**

# <u>ಜೆ.ಎಂ.ಎಫ್.ಸಿ. ನ್ಯಾಯಾಲಯ, ಸಿದ್ದಾಪುರ</u>

ಸಿ.ಸಿ ನಂಃ 596 /2020

ಸಿಡಬ್ಲ್ಯೂಃ 1 ಪಿಡಬ್ಲ್ಯೂಃ 1

| | |
|---|---|
| ಹೆಸರುಃ | ದೇವೆಂದ್ರ ಗಣಪತಿ ನಾಯ್ಕ |
| ತಂದೆ/ಗಂಡನ ಹೆಸರುಃ | ಗಣಪತಿ ನಾಯ್ಕ |
| ವಯಸ್ಸುಃ | 42 ವರ್ಷ |
| ಉದ್ಯೋಗಃ | ಕೃಷಿ |
| ವಾಸಃ | ಕುರವಂತೆ |

ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 22-12-2025 ರಂದು ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ</u>**

1. ನಾನು 2018 ರಲ್ಲಿ ಕುರವಂತೆ ಗ್ರಾಮದಲ್ಲಿ ಸರ್ವೆ ನಂ 7/2 ರಲ್ಲಿ 1 ಎಕರೆ 17 ಗುಂಟೆ ಜಮೀನನ್ನು ರಾಜಾರಾಮ ಕೃಷ್ಣ ಭಟ್ ರವರಿಂದ ಖರೀದಿ ಮಾಡಿರುತ್ತೇನೆ. ಆರೋಪಿತರು ಗೊತ್ತು. ನನ್ನ ಜಮೀನಿನ ಪಕ್ಕದಲ್ಲಿ ಆರೋಪಿತರ ಜಮೀನು ಇರುತ್ತದೆ.

2. ದಿಃ 16-07-2020 ರಂದು ಬೆಳಿಗ್ಗೆ 10-00 ಗಂಟೆಗೆ ಕುರವಂತೆ ಗ್ರಾಮದಲ್ಲಿ ಸರ್ವೆ ನಂ 7/2 ರಲ್ಲಿ ನಾನು ಮತ್ತು ಚಾಸಾ-4 ರಿಂದ 6 ರವರು ಜಮೀನಿನಲ್ಲಿ ನೆಟಿ ಮಾಡುತ್ತಿದ್ದು , ಆಗ ಚಾಸಾ-7 ಮತ್ತು 8 ರವರು ಸದರಿ ಸ್ಥಳದಲ್ಲಿ ಇದ್ದರು. ಆಗ 2 ನೇ ಆರೋಪಿ ಸದರಿ ಸ್ಥಳಕ್ಕೆ ಬಂದು ಅವಾಚ್ಯ ಶಬ್ದಗಳಿಂದ ಬೈದು, ನನ್ನನ್ನು ಕುತ್ತಿಗೆ ಹಿಡಿದು ದೂಡಿದರು, ನಂತರ 4 ರಿಂದ 6 ನೇ ಆರೋಪಿತರು ನನಗೆ ಬಡಿಗೆಯಿಂದ ಹೊಡೆದಿರುತ್ತಾನೆ. ನಂತರ 8 ನೇ ಆರೋಪಿ ನನಗೆ ಕತ್ತಿಯಿಂದ ಹೊಡೆದಿರುತ್ತಾನೆ. ನಂತರ ಸದರಿ ಗಲಾಟೆಯನ್ನು ನಮ್ಮ ಊರಿನವರು ಬಿಡಿಸಿರುತ್ತಾರೆ. ನಂತರ ನನ್ನ ತಮ್ಮನಾದ ಚಾಸಾ-4 ರವರಿಗೆ 4 ಮತ್ತು 6 ನೇ ಆರೋಪಿತರು ಕೈಯಿಂದ ಗುದ್ದಿರುತ್ತಾರೆ. ನಂತರ ಸದರಿ ಗಲಾಟೆಯನ್ನು ನಮ್ಮ ಊರಿನವರು ಬಿಡಿಸಿರುತ್ತಾರೆ. ನಂತರ ಆರೋಪಿತರು ನಮ್ಮನ್ನು ಕೊಲೆ ಮಾಡುವುದಾಗಿ ಜೀವ ಬೆದರಿಕೆ ಹಾಕಿರುತ್ತಾರೆ.

3. ನಂತರ ನನ್ನನ್ನು ಚಾಸಾ-7 ಮತ್ತು 8 ರವರನ್ನು ಓಮಿನಿ ಕಾರಿನಲ್ಲಿ ಸಿದ್ದಾಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆಗಾಗಿ ದಾಖಲಿಸಿರುತ್ತಾರೆ. ಆಗ ಸಿದ್ದಾಪುರ ಪೊಲೀಸರು ಆಸ್ಪತ್ರೆಗೆ ಬಂದಾಗ ನಾನು ಪೋಲೀಸರಿಗೆ ಹೇಳಿಕೆ ದೂರು

ನೀಡಿರುತ್ತೇನೆ. ಸದರಿ ಹೇಳಿಕೆ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆ ನಾನು ಪೋಲೀಸರಿಗೆ ನೀಡಿದ



ಹೇಳಿಕೆ ದೂರು ಆಗಿದ್ದು, ಸಾಕ್ಷಿ ಸದರಿ ದಾಖಲೆ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-1 (ಎ) ಎಂದು ಗುರುತಿಸಲಾಯಿತು.

4. ದಿಃ 17-07-2020 ರಂದು ಪೋಲೀಸರು ನಮ್ಮ ಊರಿಗೆ ಬಂದಾಗ ಘಟನಾ ಸ್ಥಳವನ್ನು ಪೋಲೀಸರಿಗೆ ನಾನೇ ತೋರಿಸಿರುತ್ತೇನೆ. ನಾನು ತೋರಿಸಿದ ಸ್ಥಳದಲ್ಲಿ ಪಂಚರಾದ ಚಾಸಾ-2 ಮತ್ತು 3 ರವರ ಸಮಕ್ಷಮ ಅದೇ ದಿನ ಬೆಳಿಗ್ಗೆ 11-00 ರಿ ಂದ 11-30 ವರೆಗೆ ಪಂಚನಾಮೆ ಮಾಡಿರುತ್ತಾರೆ ಮತ್ತು ಸದರಿ ಸ್ಥಳದಲ್ಲಿ 4 ಬಡಿಗೆ ಮತ್ತು ಒಂದು ಕತ್ತಿಯನ್ನು ಪೊಲೀಸರು ವಶಪಡಿಸಿಕೊಂಡಿರುತ್ತಾರೆ. ಸದರಿ ಬಡಿಗೆ ಮತ್ತು ಕತ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಮು.ಮಾ-1 ಎಂದು ಗುರುತಿಸಲಾಯಿತು. ಮು.ಮಾ -1 ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು.ಮಾ-1(ಎ) ಎಂದು ಗುರುತಿಸಲಾಯಿತು. ನಂತರ ಸದರಿ ಪಂಚನಾಮೆ ಕಾಲಕ್ಕೆ ಎರಡು ಭಾವಚಿತ್ರಗಳನ್ನು ತೆಗೆದಿರುತ್ತಾರೆ. ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆ ದಿಃ 17-07-2020 ರ ಸ್ಥಳ ಪಂಚನಾಮೆ ಆಗಿದ್ದು, ಸಾಕ್ಷಿ ಸದರಿ ದಾಖಲೆ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-2 (ಎ) ಎಂದು ಗುರುತಿಸಲಾಯಿತು. ಸದರಿ ಪೊಟೊಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈ ಹಂತದಲ್ಲಿ ಭಾವಚಿತ್ರವನ್ನು ತೋರಿಸಿದ್ದು, ಸದರಿ ಭಾವಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ-3 ಮತ್ತು 4 ಎಂದು ಗುರುತಿಸಲಾಯಿತು.

5. ನಂತರ ದಿಃ 17-07-2020 ರಂದು ಚಾಸಾ-10 ರವರಿಗೆ 9 ನೇ ಆರೋಪಿಯ ಹೆಸರನ್ನು ರಮೇಶ ತಪ್ಪಾಗಿ ನಿ.ಪಿ-1 ರಲ್ಲಿ ಬರೆಸಿದ್ದು, ಸದರಿ ಹೆಸರನ್ನು ದಿನೇಶ ಎಂದು ಸರಿಪಡಿಸುವಂತೆ ನಿ.ಪಿ-1 ರಂತೆ ದೂರು ನೀಡುವ ಕಾಲಕ್ಕೆ ಬರಿಸಿದ್ದು ಅದನ್ನು ಸರಿಪಡಿಸುವ ಬಗ್ಗೆ ಮರು ಹೇಳಿಕೆ ನೀಡಿರುತ್ತೇನೆ.

6. ಆ ದಿನ ನನಗೆ ಹಲ್ಲೆ ಮಾಡಿದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ 8 ನೇ ಆರೋಪಿ ನ್ಯಾಯಾಲಯಕ್ಕೆ ಗೈರು ಹಾಜರಾಗಿದ್ದು 8 ನೇ ಆರೋಪಿತನ ಗುರುತಿಸುವಿಕೆಗೆ 8 ನೇ ಆರೋಪಿ ಪರ ವಕೀಲರು ಯಾವುದೇ ತಕರಾರು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಆರ್ ಆರ್ ಎಚ್ ವಕೀಲರಿಂದಃ**

ನಾನು 2018 ರಲ್ಲಿ ಕುರವಂತೆ ಗ್ರಾಮದಲ್ಲಿ ಸರ್ವೆ ನಂ 7/2 ರಲ್ಲಿ 1 ಎಕರೆ 17 ಗುಂಟೆ ಜಮೀನನ್ನು ರಾಜಾರಾಮ ಕೃಷ್ಣ ಭಟ್ ರವರಿಂದ ಖರೀದಿ ಮಾಡಿದ ಬಗ್ಗೆ ದಾಖಲೆಯನ್ನು ಪೋಲೀಸರಿಗೆ ನೀಡಿರುತ್ತೇನೆ. ಸದರಿ ಕ್ರಯ ಪತ್ರ ಮತ್ತು ಸದರಿ ಆಸ್ತಿಗೆ ಸಂಬಂದಿಸಿದಂತೆ RTC ಮತ್ತು ಕ್ರಯದ ಉತಾರನ್ನು



ಪೋಲೀಸರಿಗೆ ನೀಡಿರುತ್ತೇನೆ. ಸದರಿ ದಾಖಲೆಗಳನ್ನು ಪೊಲೀಸರು ಈ ಪ್ರಕರಣದಲ್ಲಿ ಹಾಜರುಪಡಿಸಿರುತ್ತಾರೆಯೊ ಇಲ್ಲವೊ ನನಗೆಗೊತ್ತಿಲ್ಲ. ಸದರಿ ಗಲಾಟೆ ಕುರುವಂತೆ ಗ್ರಾಮ ಸರ್ವೆ ನಂ 7/2 ರಲ್ಲಿ ಆಗಿರುತ್ತದೆ. ಸದರಿ ಕುರವಂತೆ ಗ್ರಾಮದಲ್ಲಿ ಸರ್ವೆ ನಂ 7/2 ನನಗೆ ಸಂಬಂದಿಸಿರುತ್ತದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಸದರಿ ಕುರವಂತೆ ಗ್ರಾಮದಲ್ಲಿ ಸರ್ವೆ ನಂ 7/2ರ ಲಗತ್ತು ಆರೋಪಿತರಿಗೆ ಸೇರಿದ ಜಮೀನು ಇರುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಆರೋಪಿತರಿಗೆ ಸೇರಿದ ಸದರಿ ಸರ್ವೆ ನಂಬರ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಆರೋಪಿತರಿಗೆ ಸೇರಿದ ಜಮೀನು ಕುರುವಂತೆ ಗ್ರಾಮ ಸರ್ವೆ ನಂ 9/3 ಎಂದು ನುಡಿಯುತ್ತಾರೆ.

2. ದಿಃ 16-07-2020 ರಂದು ಯಾವ ವಾರ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ಆ ದಿನ ನಾವು ಗದ್ದೆ ನೆಟ್ಟಿಗೆ ಸುಮಾರು 20 ಜನ ಹೊಗಿದ್ದೆವು. ಸದರಿ 20 ಜನ ಯಾರು ಯಾರು ಎಂದು ನಿಪಿ-1 ರಲ್ಲಿ ಬರೆಸಿಲ್ಲ.

3. ಆರೋಪೀತರ ಜಮೀನಿಂದ ನನ್ನ ಜಮೀನಿಗೆ ಹೋಗಲು ದಾರಿ ಬಿಡುವಂತೆ OS No 91/2019 ರಂತೆ ದಾಖಲಿಸಿರುತ್ತೇನೆ ಎಂದರೆ ಸರಿ. ಸದರಿ ದಾವೆಯನ್ನು ಈ ಪ್ರಕರಣದಲ್ಲಿ ಪಿರ್ಯಾದಿಯನ್ನು ನೀಡುವ ಒಂದು ತಿಂಗಳ ಮೊದಲು ಸಲ್ಲಿಸಿರುತ್ತೇನೆ. ಸದರಿ ದಾವೆಗೆ ಅನುಕೂಲ ಆಗಲಿ ಎಂದು ಆರೋಪಿತರ ವಿರುದ್ದ ಸುಳ್ಳು ಪಿರ್ಯಾಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

4. ನಿ.ಪಿ-1 ನ್ನು ನಾನೇ ಹೇಳಿದಂತೆ ಪೋಲೀಸರು ಬರೆದಿರುತ್ತಾರೆ. ಸದರಿ ಪೋಲೀಸರ ಹೆಸರು ನನಗೆ ಗೊತ್ತಿಲ್ಲ. ನಾನು ಮತ್ತು ಚಾಸಾ-4 ರವರು ನಿಪಿ-1 ರಂತೆ ದೂರನ್ನು ನೀಡಲು ಸಿದ್ದಾಪುರ ಪೋಲೀಸ ಠಾಣೆಗೆ ಅದೇ ದಿನ ಮದ್ಯಾಹ್ನ 12-30 ಗೆ ಹೋಗಿರುತ್ತೇವೆ. ಚಾಸಾ- 7 ಮತ್ತು 8ರವರನ್ನು ಆ ದಿನ ನಮ್ಮ ಜಮೀನಿಗೆ ನಾನೇ ಕರೆಯಿಸಿಕೊಂಡು ಹೋಗಿರುತ್ತೇನೆ. ಆ ದಿನ ಚಾಸಾ-7 ಮತ್ತು 8ರವರು ಆ ದಿನ ನಮ್ಮ ಜಮೀನಿನ ನೆಟ್ಟಿ ಮಾಡುವುದನ್ನು ನೋಡಲು ಬಂದಿರುತ್ತಾರೆ. ಆ ಬಗ್ಗೆ ನಿ.ಪಿ-1 ರಲ್ಲಿ ಬರೆಸಿಲ್ಲ .

5. ಸದರಿ ನನ್ನ ಗದ್ದೆಗೆ ಯಾವುದೇ ಬೇಲಿಯನ್ನು ಮಾಡಿಲ್ಲ. ನಿಪಿ-3 ಮತ್ತು 4 ಪೊಟೊದಲ್ಲಿ ಜಮೀನಿನಲ್ಲಿ ನೆಟ್ಟಿ ಮಾಡುತ್ತಿರುವ ಬಗ್ಗೆ ಕಾಣುವುದಿಲ್ಲ. ನಿಪಿ-3 ಮತ್ತು 4 ಪೊಟೊವನ್ನು ಪೋಲಿಸರು ತೆಗೆದಿರುತ್ತಾರೆ ಆದರೆ ಅವರ ಹೆಸರು ನನಗೆ ಗೊತ್ತಿಲ್ಲ.

6. 16 ಮತ್ತು 17 ದಿನದಂದು ಜುಲೈ -2020 ರಂದು ಮಳೆ ಗಾಲ ಇರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಮಳೆಗಾಲದಲ್ಲಿ ರೆನ್ ಕೊಟ್ ಮತ್ತು ಛತ್ರಿ ಬಳಸುತ್ತೆವೆ ಎಂದರೆ ಸರಿ. ನಿಪಿ-3 ಮತ್ತು 4 ಪೊಟೊದಲ್ಲಿ ರೆನ್ ಕೊಟ್ ಮತ್ತು ಛತ್ರಿ ಕಾಣುವುದಿಲ್ಲ ಎಂದರೆ ಸರಿ.

7. ನಿ.ಪಿ-2 ಪಂಚನಾಮೆಯನ್ನು ಪೊಲೀಸರು ಬರೆದಿರುತ್ತಾರೆ ಅದರೆ ಅವರ ಹೆಸರು ನನಗೆ ಗೊತ್ತಿಲ್ಲ. ನಿ.ಪಿ-2 ಪಂಚನಾಮೆಯನ್ನು ನಾನೇ ಹೇಳಿ ಬರೆಸಿರುತ್ತೇನೆ. ನಿ.ಪಿ-2 ಕ್ಕೆ ಪಂಚರಾದ ಚಾಸಾ-2

ಮತ್ತು 3 ರವರನ್ನು ಸ್ಥಳಕ್ಕೆ ನಾನೇ ದೂರವಾಣಿ ಕರೆ ಮಾಡಿ ಕರೆಯಿಸಿರುತ್ತೆನೆ. ಆ ದಿನ ಪೊಲೀಸರು ಒಂದೇ ಪಂಚನಾಮೆ ಮಾಡಿರುತ್ತಾರೆ. ಸದರಿ ಪಂಚನಾಮೆಗೆ ಚಾಸಾ-2 ಮತ್ತು 3 ರವರು ಎಷ್ಟು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾದ ಮುಮಾ-1 (4 ಬಡಿಗೆಗಳು ಮತ್ತು ಒಂದು ಕತ್ತಿಯನ್ನು) ಆ ದಿನ ನಾನೇ ಪೋಲೀಸರಿಗೆ ನೀಡಿರುತ್ತೇನೆ. ಆ ಬಗ್ಗೆ ನಿ.ಪಿ-2 ಪಂಚನಾಮೆಯಲ್ಲಿ ಬರೆಸಿಲ್ಲ.

8. ನಿ.ಪಿ-1 ಪಿರ್ಯಾದಿಯಲ್ಲಿ ಮಂಜುನಾಥ, ಕೃಷ್ಣ, ರಾಮ, ಅನಂತ, ಶಿವಾನಂದ, ಸುರೇಶ, ಅಣ್ಣಪ್ಪ, ಸಚೀನ್ ಮತ್ತು ಗಿರೀಶ ರವರ ಹೆಸರನ್ನು ಬರೆಸಿರುತ್ತೇನೆ.

9. ಆ ದಿನ 8 ನೇ ಆರೋಪಿಯ ಕೈಯಲ್ಲಿ ಕತ್ತಿ ಇತ್ತು. ಆ ದಿನ ಬಡಿಗೆಯನ್ನು 2, 3, 4, 6 ರವರ ಕೈಯಲ್ಲಿ ಬಡಿಗೆ ಇತ್ತು. ನಾನು ಗಿರೀಶ ಎಂಬುವವರ ವಿರುದ್ಧ ಪ್ರಕರಣ ದಾಖಲಿಸಿರುತ್ತೇನೆ. ಸದರಿ ಗಿರಿಶ ಈ ದಿನ ನ್ಯಾಯಾಲಯದ ಮುಂದೆ ಕುಳಿತಿರುವ ಬಲದಿಂದ 2 ನೇಯವರು ಆಗಿರುತ್ತಾರೆ.

10. ಆ ದಿನ ಗಲಾಟೆ ಆಗುವಾಗ ನಾನು ಗದ್ದೆಯಲ್ಲಿಯೇ ಇದ್ದೆನು. ಆ ದಿನ ಸದರಿ ಗದ್ದೆ ನೀರು ತುಂಬಿಕೊಂಡಿತ್ತು. ಆ ದಿನ ಸದರಿ ಗದ್ದೆಯಲ್ಲಿ ಕಾಲಿಟ್ಟರೆ ಕಾಲು ಮುಳುಗುತ್ತದೆ ಎಂದರೆ ಸರಿ. ಆ ದಿನ ಆರೋಪಿತರು ನನ್ನನ್ನು ದೂಡಿದಾಗ ನಾನು ಕೆಳಗೆ ಬಿದ್ದರಿಂದ ನನ್ನ ಬಟ್ಟೆ ಒದ್ದೆಯಾಗಿತ್ತು. ಸದರಿ ಬಟ್ಟೆ ಯನ್ನು ಪೋಲೀಸರಿಗೆ ನೀಡಿಲ್ಲ. ಸದರಿ ಬಡಿಗೆ ಮತುತ ಕತ್ತಿಗೆ ಮಣ್ಣು ಮತ್ತು ಕೆಸರು ತಾಗಿರುತ್ತದೆ. ನ್ಯಾಯಾಲಯದ ಮುಂದೆ ಇರುವ ಬಡಿಗೆಗಳು ಮತ್ತು ಕತ್ತಿಗೆ ಯಾವುದೇ ಮಣ್ಣು ಮತ್ತು ಕೆಸರು ಇರುವುದಿಲ್ಲ ಎಂದರೆ ಸರಿ.

11. ಆ ದಿನ ನನ್ನ ತಲೆಗೆ ಕತ್ತಿ ಎಟು ಬಿದ್ದಿರುತ್ತದೆ . ನನಗೆ ರಕ್ತಗಾಯವಾಗಿದ್ದು ಸದರಿ ರಕ್ತ ನನ್ನ ಬಟ್ಟೆಗೂ ತಾಗಿರುತ್ತದೆ. ಸದರಿ ರಕ್ತ ತಾಗಿದ ಬಟ್ಟೆಗಳನ್ನು ನಾನು ಪೋಲೀಸರಿಗೆ ನೀಡಿಲ್ಲ.

12. ಆ ದಿನ ಸದರಿ ಗಲಾಟೆಯಾದ ನಂತರ ಸಿದ್ದಾಪುರ ಸರ್ಕಾರಿ ಆಸ್ಪತ್ರೆಗೆ ಹೋಗಿ ನಂತರ ಸಿದ್ದಾಪುರ ಪೋಲೀಸ ಠಾಣೆಗೆ ಹೋಗಿರುತ್ತೇನೆ. ನಾನು ಆ ದಿನ ಸಿದ್ದಾಪುರ ಸರ್ಕಾರಿ ಆಸ್ಪತ್ರೆಯಲ್ಲಿ ಸುಮಾರು 2 ಗಂಟೆಗಳ ಕಾಲ ಚಿಕಿತ್ಸೆ ಪಡೆದಿರುತ್ತೇನೆ ನಾನು ಆ ದಿನ ಸಿದ್ದಾಪುರ ಸರ್ಕಾರಿ ಆಸ್ಪತ್ರೆಗೆ ಮದ್ಯಾಹ್ನ 12-30 ಗೆ ಹೋಗಿರುತ್ತೇನೆ.

13. ದಿಃ 17-07-2020 ರಂದು ಪೊಲೀಸರು ನಮ್ಮ ಊರಿಗೆ ಬಂದಾಗ ಕುರುವಂತೆ ಗ್ರಾಮ ಸರ್ವೆ ನಂ 7/2 ರಲ್ಲಿ ನಿ.ಪಿ-2 ರಂತೆ ಪಂಚನಾಮೆ ಮಾಡಿರುತ್ತಾರೆ. ಸದರಿ ನಿ.ಪಿ-2 ಪಂಚನಾಮೆಯಲ್ಲಿ ಸದರಿ ಪಂಚನಾಮೆಯನ್ನು ಕುರುವಂತೆ ಗ್ರಾಮ ಸರ್ವೆ ನಂ 7/2 ರಲ್ಲಿ ಪಂಚನಾಮೆ ಮಾಡಿರುವ ಬಗ್ಗೆ ನಾನು ಹೇಳಿ ಬರೆಸಿಲ್ಲ.

14. ಗಿರೀಶ , 2, 6 ನೇ ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಆ ಬಗ್ಗೆ ನಾನು ನಿ.ಪಿ-1 ಪಿರ್ಯಾದಿಯಲ್ಲಿ ಬರೆಸಿರುತ್ತೇನೆ.

15. ಸದರಿ ಗಲಾಟೆಯನ್ನು ಚಾಸಾ-6 ರಿಂದ 8 ರವರು ಬಿಡಿಸಿರುತ್ತಾರೆ. ಚಾಸಾ-7 ರವರು ಕೊಂಡ್ಲಿ ಗ್ರಾಮದವರು . ಕೊಂಡ್ಲಿ ಗ್ರಾಮ ನಮ್ಮ ಊರಿನಿಂದ ಸುಮಾರು 20 ಕಿ ಮಿ ದೂರ ಇರುತ್ತದೆ. ಚಾಸಾ-



7 ರವರನ್ನು ನಾನೇ ನನ್ನ ಜಮೀನಿಗೆ ಕರೆಯಿಸಿರುತ್ತೇನೆ ಆದರೆ ಯಾವುದೇ ಕಾರಣ ಇರುವುದಿಲ್ಲ. ಚಾಸಾ-7 ರವರು ಸಿದ್ದಾಪುರ ಪಟ್ಟಣ ಪಂಚಾಯತದ ಸದಸ್ಯ ಎಂದರೆ ಸರಿ.

16. ಆರೋಪಿತರು ನನ್ನ, ಚಾಸಾ-4 ರಿಂದ 6 ರ ನಡುವೆ ಪಿರ್ಯಾದಿ ನೀಡಿರುತ್ತಾರೆ ಎಂದರೆ ಸರಿ. ಆರೋಪಿತರ ಜಮೀನಿನಲ್ಲಿ ಹೊಸದಾಗಿ ರಸ್ತೆ ನಿರ್ಮಿಸಲು ಹೋಗಿ ಆರೋಪಿತರ ವಿರುದ್ಧ ಸುಳ್ಳು ದೂರು ಸಲ್ಲಿಸಿರುತ್ತೇವೆ ಎಂದರೆ

ಸರಿಯಲ್ಲ. ಸದರಿ ಆರೋಪಿತರು ನಮ್ಮ ವಿರುದ್ದ ದೂರು ಸಲ್ಲಿಸಿದ್ದರಿಂದ ನಾನುಆರೋಪಿತರ ವಿರುದ್ದ ಈ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

17. ಆರೋಪಿತರು ನನ್ನ ಜಮೀನಿಗೆ ಬಂದಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ, ನಮಗೆ ಬಡಿಗೆ ಹಾಗೂ ಕತ್ತಿಯಿಂದ ಹಲ್ಲೆಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಬಡಿಗೆಯಿಂದ ಮತ್ತು ಕತ್ತಿಯಿಂದ ಹೊಡೆದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದು ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

18. ಪೊಲೀಸರು ನನ್ನ ಜಮೀನಿಗೆ ಬಂದು ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನಿ.ಪಿ–3 ಮತ್ತು 4 ಪೊಟೊಗಳು ನನ್ನ ಜಮೀನಿನಲ್ಲಿ ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ:** ಇಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ  ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ ಸರಿ ಇದೆ.**

**ಸಹಿ ಇದೆ.**

**ಜೆ.ಎಂ.ಎಫ್.ಸಿ, ಸಿದ್ದಾಪುರ.**